2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 11/2024

ಪಿ.ಡಬ್ಲುಃ 15 ಸಿಡಬ್ಲುಃ 22

| | | |
|---|---|---|
| ಸಾಕ್ಷಿಯ ಹೆಸರು | : | ಸಿದ್ದಲಿಂಗಯ್ಯ ಸ್ವಾಮಿ |
| ತಂದೆಯ ಹೆಸರು | : | ವೀರಭದ್ರಯ್ಯ |
| ವಯಸ್ಸು | : | 59 ವರ್ಷಗಳು |
| ವೃತ್ತಿ | : | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿರವಾರ ಗ್ರಾಮ ಪಂಚಾಯಿತಿ |
| ವಾಸಸ್ಥಳ | : | ಬಳ್ಳಾರಿ. |

ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 18.02.2026.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

1) ನಾನು 2019 ರಿಂದ 2024 ರವರೆಗೆ ಸುಶಿಲಾ ನಗರ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎಂದು ಕಾರ್ಯ ನಿರ್ವಹಿಸಿದ್ದೇನೆ.

2) ದಿಃ28.10.2023 ರಂದು ಸಂಡೂರು ಪೋಲೀಸ್ ಠಾಣೆಯ ಪಿಎಸ್ಐ ರವರು ಸುಶೀಲಾ ನಗರದ ಬಸವರಾಜ ತಂದೆ ಗಿಡ್ಡ ನಾಯ್ಕ ಇವರ ವಾಸದ ಮನೆಯ ಖಾತಾ ಉತಾರವನ್ನು ಪೂರೈಸುವಂತೆ ಮೌಖಿಕ ಮನವಿಯನ್ನು ಸಲ್ಲಿಸಿದ್ದರು. ಆ ಪ್ರಕಾರ ನಾನು ಬಸವರಾಜ ತಂದೆ ಗಿಡ್ಡ ನಾಯ್ಕ ಇವರ ಮನೆಯ ಸಂಖ್ಯೆ 488 ರ, ಖಾತಾ ನಕಲನ್ನು ಪೂರೈಸಿದ್ದೇನೆ. ಸದರಿ ಮನೆ ಬಸವರಾಜ ತಂದೆ ಗಿಡ್ಡ ನಾಯ್ಕ ಇವರ ಹೆಸರಿನಲ್ಲಿ ಇದೆ. ಈಗ ನಾನು ನೀಡಿದ ಖಾತಾ ನಕಲನ್ನು ನೋಡುತ್ತಿದ್ದು ಅದನ್ನು ನಿಪಿ.19 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸದರಿ ಖಾತಾ ನಕಲನ್ನು ತನಿಖಾಧಿಕಾರಿಗಳಿಗೆ ಪತ್ರದ ಮೂಲಕ ದಿಃ07.12.2023 ರಂದು ಕಳುಹಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ20 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು.

<u>ಆರೋಪಿ ಪರವಾಗಿ ಶ್ರೀ.ಎನ್.ಬಿ.ಕೆ ವಕೀಲರು ಎಲ್.ಎ.ಡಿ.ಸಿ ರವರಿಂದ</u>

**3)** ನಾನು ಪೋಲೀಸರ ಮಾತು ಕೇಳಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಖಾತಾ ನಕಲನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.